ಸಿ.ಸಿ .ನಂ. 162/2023 ಪಿಡಬ್ಲೂಃ 1

ದಿನಾಂಕಃ 13-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಜಿ ಆರ್ ಡಿ ವಕೀಲರಿಂದಃ**

4. ನಾನು ಕಳೆದ 5 ವರ್ಷಗಳಿಂದ ಫಿರ್ಯಾದು ಬ್ಯಾಂಕಿನಲ್ಲಿ ಶಾಖಾ ವ್ಯವಸ್ಥಾಪಕನಾಗಿ ಕಾರ್ಯ ನಿರ್ವವುಸುತ್ತಿದ್ದೇನೆ. ಅದಕ್ಕಿಂತ ಪೂರ್ವದಲ್ಲಿ ಯಲ್ಲಾಪುರದ ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ. ನಮ್ಮ ಸೊಸೈಟಿಯಲ್ಲಿ ವೈಯಕ್ತಿಕ ಸಾಲ, ಗೃಹ ಸಾಲ , ವಾಹನ ಸಾಲ ಕೊಡುತ್ತೇವೆ . ವಾಹನ ಸಾಲಕ್ಕೆ 14 ಪರ್ಸೆಂಟ್ ಬಡ್ಡಿಯನ್ನು ಆಕರಣೆ ಮಾಡುತ್ತೇವೆ . ಆರೋಪಿ ವಾಹನ ಖರೀದಿ ಉದ್ದೇಶಕ್ಕೆ ಸಾಲದ ಅರ್ಜಿ ಸಲ್ಲಿಸಿರುತ್ತಾರೆ. ಆರೋಪಿ ಸಾಲದ ಅರ್ಜಿ ಸಲ್ಲಿಸಿದಾಗ ನಾನು ಪಿರ್ಯಾದು ಬ್ಯಾಂಕಿನಲ್ಲಿ ಶಾಖಾ ವ್ಯವಸ್ಥಾಪಕನಾಗಿರಲಿಲ್ಲ, ಬೇರೆಯವರು ಶಾಖಾ ವ್ಯವಸ್ಥಾಪಕರಾಗಿದ್ದರು. ಸಾಲದ ವ್ಯವಹಾರದ ಸಂದರ್ಭದಲ್ಲಿ ನಾನು ಫಿರ್ಯಾದು ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರಲಿಲ್ಲ ಕಾರಣ ನನಗೆ ಪ್ರಕರಣದ ಬಗ್ಗೆ ವೈಯಕ್ತಿಕ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ . ಆರೋಪಿ ರೋಯಲ್ ಎನ್ ಫಿಲ್ಡ ವಾಹನ ಖರೀದಿಸಲು ಸಾಲವನ್ನು ಪಡೆದಿದ್ದರು. ಅದು 2017 ರ ಮೋಡೆಲ್ ಗಾಡಿ . ಗಾಡಿಯ ಹೆಸರು ರೋಯಲ್ ಎನ್ ಫಿಲ್ಡ. ರೂ. 1,17,000/- ರೂಪಾಯಿ ಸಾಲವನ್ನು ಕೇಳಿ ಅರ್ಜಿಯನ್ನು ಸಲ್ಲಿಸಿದ್ದರು . ಸಾಲದ ಅರ್ಜಿಯನ್ನು ಸ್ವಲ್ಪ ಅವರು ತುಂಬುತ್ತಾರೆ , ಸ್ವಲ್ಪ ನಮ್ಮ ಸಿಬ್ಬಂದಿಯವರು ತುಂಬುತ್ತಾರೆ . ನಿಪಿ-7 ಸಾಲದ ಅರ್ಜಿ ಆಗಿರುತ್ತದೆ . ನಿಪಿ-7 ರಲ್ಲಿ ಯಾವ ಯಾವ ಕಾಲಂ ಗಳನ್ನು ಆರೋಪಿ ತುಂಬಿರುತ್ತಾರೆ ಹಾಗೂ ಯಾವ ಕಾಲಂಗಳನ್ನು ನಮ್ಮ ಸಿಬ್ಬಂದಿಯವರು ತುಂಬಿರುತ್ತಾರೆ ಹೇಳಲು ಬರುವುದಿಲ್ಲ . ನಿಪಿ-7 ನ್ನು ಆರೋಪಿ ತುಂಬಿಲ್ಲ ನಮ್ಮ ಸಿಬ್ಬಂದಿವರೇ ತುಂಬಿದ್ದಾರೆ ಕಾರಣ ಹೇಳಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸಾಲದ ಅರ್ಜಿಯನ್ನು ನೀಡಿದ ನಂತರ ಸಾಲವನ್ನು ಶಾಖಾ ವ್ಯವಸ್ಥಾಪಕರು ಮಂಜೂರು ಮಾಡುತ್ತಾರೆ . ಸಾಲದ ಅರ್ಜಿ ಬಂದ ನಂತರ ಯಾವಾಗ ಮಂಡಳಿಯ

ಸಭೆಯನ್ನು ಕರೆದಿದ್ದಾರೆ ನೆನಪಿಲ್ಲ. ನಮ್ಮ ಸಂಸ್ಥೆಯಲ್ಲಿ ಪ್ರತಿ ತಿಂಗಳಿಗೊಮ್ಮೆ ಮಿಟಿಂಗ್ ನಡೆಯುತ್ತಿದೆ . ಯಾವುದೇ ದಿನ ಮಿಟಂಗ್ ನ್ನು ಕರೆಯಬಹುದು . ಆಡಳಿತ ಮಂಡಳಿಯ ಸಭೆ ಹೆಡ್ ಆಫೀಸ್ ಭಟ್ಕಳದಲ್ಲಿ ನಡೆಯುತ್ತದೆ . ಸಾಲದ ಅರ್ಜಿಗಳನ್ನು ಪ್ರಧಾನ ಕಚೇರಿಗೆ ಕಳುಹಿಸುತ್ತೇವೆ ಅಲ್ಲಿಂದ ಸಾಲ ಮಂಜೂರಾಗಿ ಬರುತ್ತವೆ . ಮಂಡಳಿಯ ಸಭೆ ನಡೆಯುವ ಬಗ್ಗೆ ನಮಗೆ ಮಾಹಿತಿಯನ್ನು ಕೊಡುತ್ತಾರೆ . ಪೋನ್ ಮೂಲಕ ತಿಳಿಸುತ್ತಾರೆ . ಆಡಳಿತ ಮಂಡಳಿಯವರು ಸಭೆಯಲ್ಲಿ ಹಾಜರಿರುತ್ತಾರೆ . ಮಂಡಳಿಯ ಸಭೆಯಲ್ಲಿ ಪ್ರಧಾನ ಕಚೇರಿಯವರು ಠರವವನ್ನು ಬರೆಯುತ್ತಾರೆ. ಈ ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಠರಾವು ಆದ ಬಗ್ಗೆ ನೆನಪಿಲ್ಲ. ಈ ಸಾಲದ ಅರ್ಜಿಗೆ ಸಂಬಂಧಪಟ್ಟ ಠರಾವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಈ ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಯಾವುದೇ ಸಭೆ ನಡೆದಿಲ್ಲ ಕಾರಣ ನಾವು ಯಾವುದೇ ಠರಾವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

5. ಇದಕ್ಕೂ ಮುಂಚೆ ಆರೋಪಿ ನಮ್ಮ ಸೊಸೈಟಿಯಲ್ಲಿ ಸಾಲ ಪಡೆದಿದ್ದರೋ ಇಲ್ಲವೋ ನೆನಪಿಲ್ಲ . ನಮ್ಮ ಸಂಸ್ಥೆಯಲ್ಲಿ ಸಾಲ ಪಡೆಯವರು ನಮ್ಮ ಸಂಸ್ಥೆಯ ಸದಸ್ಯತ್ವವನ್ನು ಹೊಂದಿರಬೇಕು ಎಂದರೆ ಸರಿ . ಸದಸ್ಯತ್ವವನ್ನು ಪಡೆಯಲು ಅವರಿಂದ ಕೆವಾಯ್ ಸಿ ದಾಖಲಾತಿಗಳನ್ನು ಪಡೆಯುತ್ತೇವೆ . ಷೇರು ಸದಸ್ಯತ್ವ ಅಮೌಂಟ್ ನ್ನು ಪಡೆದುಕೊಳ್ಳುತ್ತೇವೆ . ನಂತರ ಸದಸ್ಯತ್ವ ಕೊಡುತ್ತೇವೆ . 500 ರೂಪಾಯಿ ಷೇರು ಪೀ ತೆಗೆದುಕೊಳ್ಳುತ್ತೇವೆ . ಆರೋಪಿ ಸಾಲದ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅವರಿಂದ ಅವರ ಆಧಾರ ಕಾರ್ಡ , ರೇಶನ್ ಕಾರ್ಡ ಪಡೆದಿದ್ದೇವೆ . ಆರೋಪಿಯಿಂದ ಚೆಕ್ ನ್ನು ಪಡೆದುಕೊಂಡಿಲ್ಲ. ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಎರಡು ಜಾಮೀನನ್ನು ಪಡೆದಿದ್ದೇವೆ . ಅಶೋಕ ಬಾಬು ನಾಯ್ಕ , ಮಂಜುನಾಥ ಮಹಾದೇವ ಚಂದಾವರಕರ ಜಾಮೀನುದಾರಾಗಿರುತ್ತಾರೆ . ಅವರಿಂದ ಕೂಡ ಆಧಾರ ಕಾರ್ಡ ಹಾಗೂ ರೇಶನ್ ಕಾರ್ಡ ಪಡೆದುಕೊಂಡಿರುತ್ತೇವೆ. ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಸಾಲವನ್ನು ಜನೇವರಿ 2017 ರಲ್ಲಿ ಮಂಜೂರು ಮಾಡಿರುತ್ತೇವೆ . ದಿನಾಂಕ ನೆನಪಿಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.